ಶ್ರೀ ಎಂ.ವೈ. ಘೋರ್ಪಡೆ :— ಮೈಸೂರು ಜಿಲ್ಲೆಯ 40 ಕೋಟಿ ರೂಪಾಯಿಗಳ ಕಾರ್ಯಕ್ರಮ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡುವುದಕ್ಕೆ ಸ್ವತ: ನಾನೇ ಬಂದಿದ್ದೇ. 13 ಕೋಟಿ ರೂಪಾಯಿಗಳನ್ನು ಪ್ರಥಮವಾಗಿ ಅವೇರ್‌ನೆಸ್ ಪ್ರೋಗ್ರಾಂನ್ನು ಮಾಡಬೇಕಾಗುತ್ತದೆ, ಅದನ್ನು ಮಾಡುತ್ತಿದ್ದಾರೆ. ಈ ಕಾರ್ಯಕ್ರಮ ಪೂರ್ಣಗೊಳಿಸಲು ಮೂರು ವರ್ಷಗಳು ಬೇಕು, ಇಷ್ಟೆಲ್ಲಾ ಮಾಡಿ ಯಾವುದಾದದರೂ ಹಳ್ಳಿಯಲ್ಲಿ ತೊಂದರೆ ಇರುವ ಬಗ್ಗೆ ನನಗೆ ತಿಳಿಸಲಿ, ನಾನು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಹೊಸದಾಗಿ ಶಾಲೆಗಳ ಪ್ರಾರಂಭ

276 (3378) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ನೂತನವಾಗಿ ಪ್ರಾರಂಭವಾಗಿರುವ ಗುಲ್ಬರ್ಗಾ ಶಿಕ್ಷಣ ನಿರ್ದೇಶನಾಲಯ ವ್ಯಾಪ್ತಿಯಲ್ಲಿ ಬರುವ ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಈ ವರ್ಷ ಹೊಸದಾಗಿ ಸರ್ಕಾರಿ ಪ್ರಾಥಮಿಕ ಶಾಲೆ ಹಾಗೂ ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

2) ಇದ್ದಲ್ಲಿ ಸ್ಥಾಪಿಸಲಿರುವ ಸ್ಥಳಗಳ ಹೆಸರು ಹಾಗೂ ಸಂಖ್ಯೆಗಳೆಷ್ಟು (ವಿವರ ನೀಡುವುದು)

ಶ್ರೀ ಎಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ಹೌದು

2) ಬಸವನಬಾಗೇವಾಡಿ ಮತಕ್ಷೇತ್ರದಲ್ಲಿ ಈ ವರ್ಷ ಹೊಸದಾಗಿ ಸವನಹಳ್ಳಿ ಗ್ರಾಮದಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಲಾಗಿದೆ. ಮತ್ತು ಕಿರಿಯ ಪ್ರಾಥಮಿಕ ಶಾಲೆಗಳು ಈ ಕೆಳಕಂಡ ಸ್ಥಳಗಳಲ್ಲಿ ಮಂಜೂರು ಮಾಡಲಾಗಿದೆ.

1) ಬಳುವೆ ಕ್ರಾಸ್
2) ಬೆಲ್ಲದ ಹೆಳಂದ ಕ್ರಾಸ್
3) ಕೊನಿಹಾಳ ಹೊಸ ಬಡಾವಣೆ
4) ಯು.ಕೆ.ಎ. ಬಡಾವಣೆ
5) ಇಂದ್ರಾನಗರ ಬಡಾವಣೆ, ಬಾಗೇವಾಡಿ
6) ಬಿರೇಶ್ವರ ನಗರ ಹಿಂಗಳೇಶ್ವರ
7) ಕುರುಬರ ದಿಣ್ಣೆ

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ :— ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ಎಳು ಕಿರಿಯ ಪ್ರಾಥಮಿಕ ಶಾಲೆಗಳನ್ನು ಮಂಜೂರು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ, ಧನ್ಯವಾದಗಳು. ಜೊತೆಗೆ ನನ್ನ ಕ್ಷೇತ್ರದ ಬಸವನಬಾಗೇವಾಡಿ ತಾಲ್ಲೂಕಿನ ಒಂದು ಗ್ರಾಮಕ್ಕೆ ದಿನಾಂಕ:25-6-2001 ರಂದು ಬಿಜಾಪುರದಿಂದ ಒಂದು ಪ್ರೌಢ ಶಾಲೆಯನ್ನು ವರ್ಗಾಯಿಸುವ ಆದೇಶವನ್ನು ಮಾಡಿದ್ದಾರೆ. ಆದರೆ ಅದನ್ನು ಇನ್ನೂ ವರ್ಗಾಯಿಸಿಲ್ಲ, ಇನ್ನೂ ವಿದ್ಯಾರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಲ್ಲ, ದಯವಿಟ್ಟು ಆ ಕೆಲಸವನ್ನು ಬೇಗ ಮಾಡಬೇಕೆಂದು ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಜೊತೆಗೆ ಸುಮಾರು 18 ಗ್ರಾಮಗಳು ಮುಳುಗಡೆಯಾಗುತ್ತಿವೆ. ಬೀಳಗಿ, ಬಾಗಲಕೋಟೆ, ಜಮಖಂಡಿ ಕ್ಷೇತ್ರಗಳಲ್ಲಿ ಸರ್ಕಾರ ಪ್ರೌಢ ಶಾಲೆಗಳನನ್ನು ಈಗಾಗಲೇ ಮಂಜೂರು ಮಾಡಿರುವುದು ಸ್ವಾಗತಾರ್ಹ ವಿಚಾರ. ಅದೇ ರೀತಿ ನನ್ನ ಮತಕ್ಷೇತ್ರದಲ್ಲಿ ಬರುವ ಬಸವನಬಾಗೇವಾಡಿ ತಾಲ್ಲೂಕಿನ ಐರೋಹಳ್ಳಿ ಹಾಗೂ ಬೆಳ್ಳೊತಿ ಗ್ರಾಮ ಸೇರಿ ಒಂದು ಪ್ರೌಢ ಶಾಲೆ, ಕೋಲಾರದಲ್ಲೊಂದು ಹೆಣ್ಣುಮಕ್ಕಳ ಪ್ರೌಢ ಶಾಲೆ, ಬಿಜಾಪುರ ತಾಲ್ಲೂಕಿನ ಹರಗೆರಿ, ಬೆಳ್ಳೊಬ್ಬಿ ಪುನರ್ವಸತಿ ಕೇಂದ್ರ ಸೇರಿ ಅಲ್ಲೊಂದು ಪ್ರೌಢ ಶಾಲೆ .....

ಅಧ್ಯಕ್ಷರು :— ವಿವರಕ್ಕೆ ಹೋಗಬೇಡಿ, ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಿ ಉತ್ತರವನ್ನು ತೆಗೆದುಕೊಳ್ಳಬೇಕು. ನೀವು ಪ್ರಶ್ನೆಯನ್ನು ಓದುತ್ತಿದ್ದೀರಷ್ಟೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ :— ಈ ವಿಷಯವನ್ನು ಸಂಬಂಧಿಸಿದ ಶಿಕ್ಷಣಾಧಿಕಾರಿಗಳು ತಮಗೆ ಸಲ್ಲಿಸಿದ್ದಾರೆ, ದಯವಿಟ್ಟು ಅಲ್ಲೂ ಕೂಡ ಹೊಸ ಶಾಲೆಗಳನ್ನು ಮಂಜೂರು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥ್ :— ಶಾಸಕರು ಮುಳುಗಡೆಯಾದ ಪ್ರದೇಶದಲ್ಲಿ ಹೊಸ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಕೇಳುತ್ತಿದ್ದಾರೆ, ಮುಳುಗಡೆ ಪ್ರದೇಶದಲ್ಲಿರುವ ವಿಶೇಷಾಧಿಕಾರಿಗಳು ಶಿಫಾರಸ್ಸು ಮಾಡಿದ್ದು ಅದು ಪಟ್ಟಿಯಲ್ಲಿದ್ದರೆ ಮಂಜೂರು ಮಾಡಲು ಸರ್ಕಾರ ತಯಾರಿದೆ. ಆದಲೇ ಹೈಸ್ಕೂಲ್, ಪ್ರಾಥಮಿಕ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ, ಅವರ ವರದಿಯಲ್ಲಿ ಏನಿದೆ ಮತ್ತು ತಾವು ಹೇಳಿದ್ದನ್ನು ಎರಡೂ ಸೇರಿಸಿ ಕ್ರೋಢೀಕರಿಸಿ ವಿಶೇಷವಾಗಿ ಒಂದು ಸಭೆಯನ್ನು ಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವಾ ಸೌಲಭ್ಯ

3137 ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.